# ಮತ್ತೆ ಬರ್ತಿದೆ ಡ್ರಾಮಾ ಜೂನಿಯರ್ಸ್!

## ಡ್ರಾಮಾ..ಡ್ರಾಮಾ..ಡ್ರಾಮಾ..

ಎಂದು ಕಳೆದ ವರ್ಷ, ಕರ್ನಾಟಕದ ಮನೆ ಮನೆಗಳಲ್ಲಿ ವೀಕೆಂಡುಗಳಲ್ಲಿ ಕೇಳಿ ಬರುತ್ತಿದ್ದ ಹಾಡು ಈಗ ಮತ್ತೆ ರಿಪೀಟ್ ಮೋಡಿನಲ್ಲಿ ಆಗಲಿದೆ. ಕನ್ನಡ ಕಿರುತೆರೆ ಇತಿಹಾಸದಲ್ಲಿ, ಅಭೂತಪೂರ್ವ ಯಶಸನ್ನು ದಾಖಲಿಸಿ ನಾಟಕ ರಂಗಭೂಮಿ ಆಧಾರಿತ ರಿಯಾಲಿಟಿ ಶೋ ಹಿಟ್ ಆಗಬಹುದು ಎಂದು ತೋರಿಸಿಕೊಟ್ಟಿದ್ದು ಜೀ಼ ಕನ್ನಡ ವಾಹಿನಿಯ ಕಾರ್ಯಕ್ರಮ ಡ್ರಾಮಾ ಜೂನಿಯರ್ಸ್.

ಡ್ರಾಮಾ ಜೂನಿಯರ್ಸ್ ಸೀಸನ್ 1 ಕಂಡ ಅಮೋಘ ಯಶಸ್ಸಿನ ಮುಖ್ಯ ಕಾರಣ ತ್ರಿವಳಿ ರತ್ನಗಳು. ಭಾರತದ ಹೆಸರಾಂತ ನಟಿ ಜೂಲಿ ಲಕ್ಷ್ಮಿ, ಕನ್ನಡಿಗರ ನೆಚ್ಚಿನ ಲಾಯರ್ ಟಿ.ಎನ್.ಸೀತಾರಾಮ್ ಹಾಗೂ ಕರ್ನಾಟಕದ ಚಿನ್ನಾರಿ ಮುತ್ತ ವಿಜಯ್ ರಾಘವೇಂದ್ರ ಹಾಗೂ ಕಾರ್ಯಕ್ರಮವನ್ನು ಲವಲವಿಕೆಯಿಂದ ನಿರೂಪಿಸಿದ ಪುಟಾಣಿಗಳ ಮಾಸ್ಟರ್, ಮಾಸ್ಟರ್ ಆನಂದ್. ಡ್ರಾಮಾ ಜೂನಿಯರ್ಸ್ ಎಂಬ ಯಶಸ್ಸಿನ ರಥದ ನಾಲ್ಕು ಗಾಲಿಗಳು ಎಂದೇ ಹೇಳಬಹುದು.

ಪುಟ್ಟ ಮಕ್ಕಳ ಪಟ ಪಟ ಮಾತು, ಮುಗ್ದತೆ, ಅಗಾಧವಾದ ಪ್ರತಿಭೆ, ದೊಡ್ಡವರನ್ನೂ ನಾಚಿಸುವ ಅವರ ನೆನಪಿನ ಶಕ್ತಿ, ಅವರ ಸಮಯೋಚಿತ ವಾಕ್ಚತುರತೆ, ಇವೆಲ್ಲವೂ ಡ್ರಾಮಾವನ್ನು ಅತ್ಯುನ್ನತ ಸ್ಥಾನಕ್ಕೆ ಕೊಂಡೊಯ್ಯಿತು. ಪ್ರತಿ ವೀಕೆಂಡಿನಲ್ಲೂ ಅವರು ಮಾಡುತ್ತಿದ್ದ ನಾಟಕಗಳು, ಅದರಲ್ಲಿರುತ್ತಿದ್ದ ಸಂದೇಶಗಳು, ನವಿರಾದ ನಿರೂಪಣೆ, ಅತ್ಯದ್ಭುತವಾದ ನಟನೆ ಇವೆಲ್ಲವೂ ಸೇರಿ, ಡ್ರಾಮಾ ಯಾವ ಸಿನಿಮಾಗೂ ಕಮ್ಮಿ ಇಲ್ಲ ಎಂದು ನಿರೂಪಿಸಿದವು.

ಮಕ್ಕಳಲ್ಲಿ ಮೇಲು ಕೀಳೆಂಬುದಿಲ್ಲ ಎಂಬುದಕ್ಕೆ ಸಾಕ್ಷಿಯಾಗಿ, ಡ್ರಾಮಾದಲ್ಲಿ ಭಾಗಿ ಆದ ಎಲ್ಲ ಮಕ್ಕಳು ಇಂದು ಸ್ಟಾರ್‌ಗಳಾಗಿದ್ದಾರೆ. ಲಿಲ್ಲಿ ಸ್ಟಾರ್ ರೇವತಿ ಉರುಫ್ ಲೇವತಿ, ರಾಜ್ಯ ಪ್ರಶಸ್ತಿ ವಿಜೇತಳಾಗಿ ಡ್ರಾಮಾ ವೇದಿಕೆಗೆ ಗೌರವ ತಂದುಕೊಟ್ಟಿದ್ದಾಳೆ. ಡಾಲಿ ಚಿತ್ರಾಲಿ ಜೀ಼ ವಾಹಿನಿಯ ಕಿಚ್ಚ ಸುದೀಪ್ ನಿರ್ಮಾಣದ 'ವಾರಸ್ದಾರ' ದಲ್ಲಿ ಪ್ರಧಾನ ಪಾತ್ರದಲ್ಲಿ ಅಭಿನಯಿಸುತ್ತಿದ್ದಾಳೆ. ಡ್ರಾಮಾದ ಹತ್ತು ಮಕ್ಕಳು 'ಎಳೆಯರು ನಾವು ಗೆಳೆಯರು' ಚಿತ್ರದಲ್ಲಿ ಅಭಿನಯಿಸಿದರು. ನಿಹಾಲ್ ಸಾಗರ್ ವಿಷ್ಣು ಕಿಲಾಡಿ ಕುಟುಂಬದ ಮಹಾಕಿಲಾಡಿಯಾಗಿದ್ದಾನೆ.

ಡ್ರಾಮಾ ಜೂನಿಯರ್ಸ್ ಎರಡನೇ ಸೀಸನ್‌ಗೆ ಕರ್ನಾಟಕ ರಾಜ್ಯದ ಎಂಟು ಮುಖ್ಯ ಜಿಲ್ಲಾ ಕೇಂದ್ರಗಳಲ್ಲಿ ಆಡಿಷನ್ ಮಾಡಲಾಯಿತು. ಮಂಗಳೂರು, ಶಿವಮೊಗ್ಗ, ವಿಜಾಪುರ, ಹುಬ್ಬಳ್ಳಿ, ರಾಯಚೂರು, ಚಿತ್ರದುರ್ಗ, ಮೈಸೂರು ಮತ್ತು ಬೆಂಗಳೂರಿನಲ್ಲಿ ನಡೆದ ಆಡಿಷನ್‌ಗೆ ಸಾವಿರಾರು ಮಕ್ಕಳು ಆಗಮಿಸಿದ್ದರು. ಈ ಮಕ್ಕಳ ಅದ್ವಿತೀಯ ಪ್ರತಿಭೆ ಆಡಿಷನ್ ಮಾಡಲು ಹೋದ ತಂಡವನ್ನು ಬೆರಗುಗೊಳಿಸಿತು. ಈ ತಂಡ ಮುದ್ದು ಮಕ್ಕಳ ಪ್ರತಿಭೆ ನೋಡುತ್ತಾ ಮಕ್ಕಳ ನಡುವೆ ಮಕ್ಕಳಾಗಿ, ಮುದ್ದಾಗಿ ನಟಿಸುವ ಚೆನ್ನಾಗಿ ನಗಿಸುವ ಮೂವತ್ತು ಪ್ರತಿಭೆಗಳನ್ನು ಹೆಕ್ಕಿ ತಂದಿದ್ದಾರೆ.

ಡ್ರಾಮಾ ಜೂನಿಯರ್ಸ್ ಸೀಸನ್ 2, ಜುಲೈ 22ರಿಂದ ಶನಿ–ಭಾನು ರಾತ್ರಿ 9ಕ್ಕೆ ಜೀ಼ ಕನ್ನಡದಲ್ಲಿ ಪ್ರಸಾರವಾಗಲಿದ್ದು ಕಳೆದ ಬಾರಿಯಂತೆ ಈ ಬಾರಿಯೂ ತನ್ನ ಯಶಸ್ಸಿನ ಪಯಣ ಮುಂದುವರೆಸುವುದರಲ್ಲಿ ಯಾವುದೇ ಸಂಶಯವಿಲ್ಲ!

ಡ್ರಾಮಾ Juniors-2

SPECIAL PARTNER FOOTWEAR PARTNER




SPECIAL PARTNER FOOTWEAR PARTNER ASSOCIATE SPONSORS

**ಜುಲೈ 22 ರಿಂದ ಶನಿ–ಭಾನು ರಾತ್ರಿ 9ಕ್ಕೆ**